ಇ) ಅಂತಹ ಷರತ್ತುಗಳನ್ನು ಅಳವಡಿಸಿಕೊಳ್ಳಲಾಗಿರುವುದಿಲ್ಲ ಅದಾಗ್ಯೂ ರಸ್ತೆಯುದ್ದಕ್ಕೂ ಇಕ್ಕೆಲಗಳಲ್ಲಿ 15 ಮೀಟರ್ ಜಾಗೆಯಲ್ಲಿ ಯಾವುದೇ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ನೀಡದಿರಲು ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಪ್ಲಾನಿಂಗ್ ಅಥಾರಿಟಿ (ಬಿಎಂಐಸಿಎಪಿಎ) ಕಾಯ್ದೆಯ ನಿಬಂಧನೆಯಡಿ ಒಳಪಟ್ಟಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಪರಿಷ್ಕರಿಸಿದ ಪಡಿತರ ಚೀಟಿಯಲ್ಲಿ ಲೋಪದೋಷ

839 - ಶ್ರೀ ಲಿಂಗಪ್ಪ ಸಿ.ಎಂ. (ರಾಮನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಪರಿಷ್ಕರಿಸಿ ವಿತರಿಸಿದ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಿಸಿದ ಹಸಿರು ಹಾಗೂ ಕೆಂಪು ಬಣ್ಣದ ಪಡಿತರ ಚೀಟಿಯ ಫಲಾನುಭವಿಗಳ ಪಟ್ಟಿಯಲ್ಲಿ ಸಾಕಷ್ಟು ದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳು ಯಾವುವು?

ಇ) ಕೈಬಿಡಲಾಗಿರುವ ಅರ್ಹ ಫಲಾನುಭವಿಗಳಿಗೆ ಹಸಿರು ಮತ್ತು ಕೆಂಪು ಪಡಿತರ ಚೀಟಿಗಳನ್ನು ಎಂದು ನೀಡಲಾಗುವುದು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹಸಿರು ಕಾರ್ಡು, ಕೇಸರಿ ಕಾರ್ಡು ಸೇರಿದಂತೆ ಎಲ್ಲಾ ರೀತಿಯ ಪಡಿತರ ಚೀಟಿಗಳನ್ನು ವಿತರಿಸುವ ಸಲುವಾಗಿ ಸರ್ಕಾರವು ಆದೇಶ ಸಂಖ್ಯೆ: ಎಫ್‌ಸಿಎಸ್ 6 ಡಿಆರ್‌ಎ 2000 ದಿನಾಂಕ 1-2-2000ರ ಆದೇಶದಲ್ಲಿ ಪರಿಷ್ಕೃತ ಸರಕೃತ ಮಾರ್ಗ ಸೂಚಿಗಳನ್ನು ನೀಡಿದೆ. ಈ ಆದೇಶದನುಸಾರ ಕಾರ್ಡು ಹೊಂದದೆ ಇರುವ ಅರ್ಜಿದಾರನು ತನ್ನ ಕುಟುಂಬದ ಪಡಿತರ ಚೀಟಿಗಾಗಿ ವಾಸಸ್ಥಳದ ಬಗ್ಗೆ ತಮ್ಮ ಹಿಂದಿನ ವಾಸದ ಬಗ್ಗೆ ಮಾಹಿತಿ ಹಾಗೂ ಇತರೆ ದಾಖಲೆಗಳೊಂದಿಗೆ ಸಂಬಂಧಪಟ್ಟ ಉಪ ನಿರ್ದೇಶಕರು. ಪಡಿತರ ಅಧಿಕಾರಿ: ತಹಶೀಲ್ದಾರ್ ಇವರಿಗೆ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಹಸಿರು ಕಾರ್ಡು ಬೇಕಿದ್ದಲ್ಲಿ ಈ ದಾಖಲೆಗಳ ಜೊತೆಗೆ ಆದಾಯದ ಪ್ರಮಾಣ ಪತ್ರವನ್ನು ಒದಗಿಸಬೇಕಾಗುತ್ತದೆ. ಸಾಮಾನ್ಯವಾಗಿ ಅರ್ಜಿಯನ್ನು ಸಲ್ಲಿಸಿದ 30 ದಿನಗಳೊಳಗಾಗಿ ಸಂಬಂಧಿಸಿದ ಆಹಾರ ನಿರೀಕ್ಷಕರು ಪರಿಶೀಲಿಸಿ ಪಡಿತರ ಚೀಟಿಯನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳುವರು.